# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1956 (2263) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿರುವವರು) |
| ಉತ್ತರಿಸಬೇಕಾದ ದಿನಾಂಕ | : | 21.03.2022 |
| ಉತ್ತರಿಸುವವರು | : | ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮ ಗುಡಿಂಗಲ್'ನ ಸರ್ವೆ ನಂ.105ರ ಈ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವುದೇ; | ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮ ಗುಡಿಂಗಲ್'ನ ಸರ್ವೆ ನಂ.105ರಲ್ಲಿ ಯಾವುದೇ ಅಧಿಸೂಚಿತ ಅರಣ್ಯ ಇರುವುದಿಲ್ಲ. ಆದರೆ, ಸದರಿ ಸರ್ವೆ ನಂಬರ್ ನಲ್ಲಿ 552-05 ಎಕರೆ-ಗುಂಟೆ ವಿಸ್ತೀರ್ಣದ ಪ್ರದೇಶವು ಪರಿಭಾವಿತ ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ. |
| ಆ) | ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಟ್ಟಿದ್ದರೆ, ಇದರ ವಿಸ್ತೀರ್ಣವೆಷ್ಟು; ಇಲಾಖೆಯು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ತೆಗೆದುಕೊಂಡಿರುವ ಕ್ರಮವೇನು; | ಇಜ್ಜಲಘಟ್ಟ ಗ್ರಾಮದ ಸರ್ವೆ ನಂ.105ರಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಒಟ್ಟು 552-05 ಎಕರೆ ವಿಸ್ತೀರ್ಣವನ್ನು ಗಡಿಗುರುತಿಸಿ ನಕಾಶೆ ತಯಾರಿಸಿ ಭೌತಿಕವಾಗಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವಹಿಸಿಕೊಟ್ಟಿರುವುದಿಲ್ಲವಾದ್ದರಿಂದ ಜಂಟಿ ಮೋಜಣಿ ಮಾಡಿ ನಿರ್ದಿಷ್ಟವಾಗಿ ನಕಾಶೆ ಮೂಲಕ ಹದ್ದುಬಸ್ತು ಗುರುತಿಸಿ ಕೊಡಲು ತಹಸೀಲ್ದಾರ್, ನಾಗಮಂಗಲ ತಾಲ್ಲೂಕು ರವರಿಗೆ ವಲಯ ಅರಣ್ಯಾಧಿಕಾರಿ, ನಾಗಮಂಗಲ ರವರು ಪತ್ರ ವ್ಯವಹರಿಸಿರುತ್ತಾರೆ. |
| ಇ) | ಒತ್ತುವರಿಯಾಗಿರುವ ಪ್ರದೇಶವೆಷ್ಟು ಒತ್ತುವರಿಯನ್ನು ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) | ಇಜ್ಜಲಘಟ್ಟ ಗ್ರಾಮ ಸರ್ವೆ ನಂ.105ರಲ್ಲಿ ಆಕಾರ್ ಬಂದ್'ನ ವಿಸ್ತೀರ್ಣ 577.21 ಎಕರೆ ಇದ್ದು, ಈ ಪೈಕಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವ 552-05 ಎಕರೆ ಡೀಮ್ಡ್ ಅರಣ್ಯ ಪ್ರದೇಶವನ್ನು ಗಡಿ ಗುರುತು ಮಾಡದೆ ಇರುವ ಕಾರಣ ಸದರಿ ಸರ್ವೆ ನಂಬರ್ ನಲ್ಲಿರುವ ಒತ್ತುವರಿ ಪ್ರದೇಶಗಳು ಡೀಮ್ಡ್ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆಯೇ ಅಥವಾ ಇಲ್ಲವೇ ಎಂಬುವುದನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಜಮೀನನ್ನು ಜಂಟಿ ಮೋಜಣಿ ಮಾಡಿ ಹದ್ದುಬಸ್ತು ಗುರುತಿಸಿ ಕೊಡುವಂತೆ ತಹಶೀಲ್ದಾರ್ ನಾಗಮಂಗಲ ರವರಿಗೆ ವಲಯ ಅರಣ್ಯಾಧಿಕಾರಿ, ನಾಗಮಂಗಲ ವಲಯ ರವರು ಪತ್ರ ವ್ಯವಹಾರ ಮಾಡಿರುತ್ತಾರೆ. |
| ಈ) | ಸದರಿ ಜಮೀನು ಅರಣ್ಯ ಪ್ರದೇಶವೆಂದು ಘೋಷಿಸಿರುವ ಬಗ್ಗೆ ರಾಜ್ಯ ಪತ್ರ ಆಗಿದೆಯೇ? (ಆಗಿದ್ದಲ್ಲಿ ಅದರ ಪ್ರತಿಯನ್ನು ನೀಡುವುದು) | ಸದರಿ ಜಮೀನು ಅರಣ್ಯ ಪ್ರದೇಶವೆಂದು ಘೋಷಿಸಿರುವ ಬಗ್ಗೆ ರಾಜ್ಯ ಪತ್ರದಲ್ಲಿ ಅಧಿಸೂಚಿಸಿರುವುದಿಲ್ಲ. |

ಸಂಖ್ಯೆ: ಅಪಜೀ 42 ಎಫ್ಎಫ್ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು